

ಸುರತ್ಕಲ್: ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ) ಸುರತ್ಕಲ್ ತನ್ನ ಅತ್ಯಾಧುನಿಕ ಕಿಂಡಲ್ ಲೈಬ್ರರಿ, ತಾಂತ್ರಿಕವಾಗಿ ಸುಧಾರಿತ ಡಿಜಿಟಲ್ ಲ್ಯಾಬ್ ಸೌಲಭ್ಯ ಮತ್ತು ಹೊಸದಾಗಿ ಸ್ಥಾಪಿಸಲಾದ 'ಅಕ್ಷರ' ಕೆಫೆಟೇರಿಯಾವನ್ನು ಎನ್ ಐಟಿಕೆಯ ಕೇಂದ್ರ ಗ್ರಂಥಾಲಯದಲ್ಲಿ ಪದ್ಮಶ್ರೀ ವಿಜಯ ಸಂಕೇಶ್ವರ ಉದ್ಘಾಟಿಸಿದರು. ಎನ್‌ಐಟಿಕೆ ನಿರ್ದೇಶಕ ಪ್ರೊ| ಬಿ. ರವಿ, ಗ್ರಂಥಪಾಲಕ ಡಾ| ಮಲ್ಲಿಕಾರ್ಜುನ ಅಂಗಡಿ, ಪ್ರೊ| ಎಸ್.ಎಸ್. ಕಾಮತ್ ಮತ್ತಿತರರಿದ್ದರು. ಎನ್‌ಐಟಿಕೆ 1996ರ ಹಳೆಯ ವಿದ್ಯಾರ್ಥಿಗಳ ಬ್ಯಾಚ್ ಉದಾರ ದೇಣಿಗೆಗಳಿಂದ ಧನಸಹಾಯ ಪಡೆದ ಕಿಂಡಲ್ ಗ್ರಂಥಾಲಯವು ಕೇಂದ್ರ ಗ್ರಂಥಾಲಯಕ್ಕೆ ಸೇರ್ಪಡೆಯಾಗಿದೆ.

Udayavani, Date:06/02/24, p, no - 24